## ಮಹಾ ತಾಯಂದಿರು

**ಪೆಂಚ್ ಅರಣ್ಯದ 'ಕಾಲರ್ ವಾಲಿ':** ಮಧ್ಯಪ್ರದೇಶ ರಾಜ್ಯದ ಪೆಂಚ್ ಹುಲಿ ಸಂರಕ್ಷಿತ ಅರಣ್ಯ, ಅಲ್ಲಿನ ಆರೋಗ್ಯಕರ ಹುಲಿ ಸಂಖ್ಯೆಗೆ ಮೊದಲಿನಿಂದಲೂ ಫೇಮಸ್. ರೇಡಿಯೊ ಕಾಲರ್ ತೊಟ್ಟುಕೊಂಡು 'ಕಾಲರ್ ವಾಲಿ' ಎಂಬ ಹೆಸರಿನಿಂದ ಕರೆಯಲಾಗುತ್ತಿದ್ದ ಹೆಣ್ಣು ಹುಲಿ 2008ರಿಂದ 2019ರವರೆಗಿನ ಅವಧಿಯಲ್ಲಿ ಎಂಟು ಹೆರಿಗೆಗಳಿಂದ 30 ಮರಿಗಳಿಗೆ ಜನ್ಮ ನೀಡಿತ್ತು. ಇವುಗಳಲ್ಲಿ 26 ಹುಲಿಗಳು ಬದುಕಿ ಉಳಿದು ಈಗ ಹರೆಯಕ್ಕೆ ಕಾಲಿಟ್ಟಿವೆ. 2022ರಲ್ಲಿ ಕಾಲರ್ ವಾಲಿ ಮರಣಿಸಿದಳು.

**ತಡೋಬಾದ 'ಮಾಧುರಿ':** ಮಹಾರಾಷ್ಟ್ರ ರಾಜ್ಯದ ತಡೋಬಾ ರಕ್ಷಿತಾರಣ್ಯದ ಮಹಾತಾಯಿ ಎಂದೇ ಖ್ಯಾತಳಾಗಿದ್ದ ಮಾಧುರಿ 2010 ರಿಂದ 2017ರ ಅವಧಿಯಲ್ಲಿ ಒಟ್ಟು ಐದು ಹೆರಿಗೆಗಳಿಂದ 19 ಮರಿಗಳಿಗೆ ಜನ್ಮ ನೀಡಿದ್ದಳು. ಜನರಿಗೆ ಕೊನೆಯ ಬಾರಿಗೆ ಕಾಣಿಸಿಕೊಂಡದ್ದು 2018ರಲ್ಲಿ. ಅದರ ನಂತರ ಯಾರ ಕಣ್ಣಿಗೂ ಬೀಳದಿದ್ದರಿಂದ ಅದು ಮರಣಿಸಿರಬಹುದೆಂದು ನಂಬಲಾಗಿದೆ.

**ರಣಥಂಬೋರ್‌ನ 'ಮಚಲಿ':** ಭಾರತದ ಹುಲಿ ಆವಾಸಗಳ ಪೈಕಿ ಅತ್ಯಂತ ಸದೃಢ ಆವಾಸ ಎಂಬ ಖ್ಯಾತಿ ರಾಜಸ್ಥಾನದ ರಣಥಂಬೋರ್ ಅಭಯಾರಣ್ಯಕ್ಕಿದೆ. 1999ರಿಂದ 2006ರ ಅವಧಿಯಲ್ಲಿ ಅಲ್ಲಿನ ಮಚಲಿ ಎಂಬ ಹೆಣ್ಣು ಹುಲಿ ತನ್ನ ಐದು ಹೆರಿಗೆಗಳಿಂದ 11 ಮರಿಗಳಿಗೆ ಜನ್ಮ ನೀಡಿತ್ತು. ತನ್ನ 19ನೆಯ ವಯಸ್ಸಿನಲ್ಲಿ 2016ರಲ್ಲಿ ಮರಣಿಸಿತು. ಇದನ್ನು ವನ್ಯದಲ್ಲಿರುವ ಹುಲಿಯ ದೀರ್ಘ ಜೀವಿತಾವಧಿ ಎನ್ನಬಹುದು.

**ಪೆಂಚ್‌ನ 'ಬಡಿ ಮಾದ' (ಮಹಾತಾಯಿ):** ಪೆಂಚ್ ಅರಣ್ಯದ ರಾಣಿ ಎಂದೇ ಖ್ಯಾತಿ ಪಡೆದಿದ್ದ ಬಡಿಮಾದ ಎಂಬ ಹುಲಿಯನ್ನು ಹುಲಿ ತಜ್ಞರು, ಗಾರ್ಡ್‌ಗಳು, ಅರಣ್ಯಾಧಿಕಾರಿಗಳು ಮತ್ತು ಜನಸಾಮಾನ್ಯರು ತಾಯಂದಿರ ತಾಯಿ (ಮದರ್ ಆಫ್ ಮದರ್ಸ್) ಎಂದು ಪ್ರೀತಿಯಿಂದ ಕರೆಯುತ್ತಿದ್ದರು. ತನ್ನ ಆರು ಹೆರಿಗೆಗಳಿಂದ 29 ಮರಿಗಳಿಗೆ ಜನ್ಮ ನೀಡಿದ್ದ ಬಡಿಮಾದಳ ಕುರಿತು ಬಿಬಿಸಿ ಸಾಕ್ಷ್ಯಚಿತ್ರ ತಯಾರಿಸಿದೆ. ಮೂವತ್ತು ಮರಿಗಳಿಗೆ ಜನ್ಮ ನೀಡಿದ್ದ ಕಾಲರ್ ವಾಲಿಯ ತಾಯಿ ಈಕೆ. ಕಾಲರ್ ವಾಲಿ ವನ್ಯದಲ್ಲಿ 12 ವರ್ಷ ಬದುಕಿದ್ದಳು.

**ತಡೋಬಾದ 'ಮಾಯಾ':** ಹೆಣ್ಣು ಹುಲಿ ಮಾಧುರಿಯ ಮೊಮ್ಮಗಳು ಎಂದೇ ಗುರುತಿಸಲಾಗುವ ಮಾಯಾ 2014ರಿಂದ 2023ರ ಅವಧಿಯಲ್ಲಿ 5 ಹೆರಿಗೆಗಳಿಂದ 13 ಮರಿಗಳಿಗೆ ಜನ್ಮ ನೀಡಿದ್ದಳು. 2023ರ ಆಗಸ್ಟ್ ತಿಂಗಳಿನ ನಂತರ ಯಾರ ಕಣ್ಣಿಗೂ ಬಿದ್ದಿಲ್ಲವಾದ್ದರಿಂದ ಮರಣ ಹೊಂದಿರಬಹುದೆಂದು ಅಂದಾಜಿಸಲಾಗಿದೆ.

ಫೋಟೊಗ್ರಾಫರ್ ಸಿದ್ಧಾರ್ಥ್ ಸಿಂಗ್, 'ಅವಳು ಕಾಡಿನ ಕೋರ್ ಏರಿಯಾದಲ್ಲಿರುವ ಬೆಲ್ದಂಡ ಎಂಬ ಹೊಂಡದ ಬಳಿ ಮೊದಲ ಸಲ ಕಾಣಿಸಿಕೊಂಡಿದ್ದಳು, ಆದ್ದರಿಂದ ಅವಳ ಹೆಸರು ಬೆಲ್ದಂಡ ಎಂದಾಯಿತು' ಎನ್ನುತ್ತಾರೆ. ಜೊತೆಗಿದ್ದ ಅಕ್ಕ ಮತ್ತು ಅಮ್ಮನನ್ನು ಗದರಿಸಿ ಓಡಿಸಿ ತನ್ನದೇ ಸರಹದ್ದು ನಿರ್ಮಿಸಿಕೊಳ್ಳುವಲ್ಲಿ ಯಶಸ್ವಿಯಾದಳು.

ಬೆಲ್ದಂಡ ಸಂಗಾತಿ ಚಲ್ತುವ ತೊರೆದಾಗ ಬೇರೆ ಗಂಡು ಹುಲಿಗಳ ಆಕ್ರಮಣ ಶುರುವಾದವು.

ದುದ್ವ ಕಾಡಿನ ಫೀಲ್ಡ್ ಡೈರೆಕ್ಟರ್ ಆಗಿದ್ದ ಸಂಜಯ್ ಪಾಠಕ್, 'ಬೆಲ್ದಂಡ ಅಸಾಧಾರಣ ಧೈರ್ಯ ಇರುವ ತಾಯಿ, ಕಾಡಿನ ದಾರಿಯಲ್ಲಿ ಇದ್ದಕ್ಕಿದ್ದಂತೆ ಎರಗಿದ ಥಂಡರ್ ಎಂಬ ಹುಲಿ ಒಂದು ಹುಲಿಮರಿಯನ್ನು ಕ್ಷಣಾರ್ಧದಲ್ಲಿ ಕೊಂದು ಹಾಕಿತು. ಉಳಿದವನ್ನು ಉಳಿಸಿಕೊಳ್ಳಲು ಬೆಲ್ದಂಡ ಮಾಡಿದ ಹೋರಾಟ ಯಾವ ಯುದ್ಧಕ್ಕೂ ಕಡಿಮೆ ಇರಲಿಲ್ಲ' ಎನ್ನುತ್ತಾರೆ.

### ಶೋ ಸ್ಟಾಪರ್!

ಬೆಲ್ದಂಡ ರಾಷ್ಟ್ರೀಯ, ಅಂತರರಾಷ್ಟ್ರೀಯ ವನ್ಯಜೀವಿ ಛಾಯಾಗ್ರಾಹಕರ ಸ್ಟಾರ್ ಐಕಾನ್. ಪ್ರತಿವರ್ಷ ದೇಶ ವಿದೇಶಗಳ ನೂರಾರು ಫೋಟೊಗ್ರಾಫರ್‌ಗಳು ಬೆಲ್ದಂಡಳ ಒಂದೇ ಒಂದು ಚಿತ್ರಕ್ಕಾಗಿ ಸಾವಿರಾರು ಮೈಲಿ ದೂರ ಕ್ರಮಿಸಿ ದುದ್ವ ಕಾಡಿಗೆ ಬರುತ್ತಾರೆ. ಕ್ಯಾಮೆರಾದ ಬೆಳಕು ಸದ್ದಿಗೆ ಹೊಂದಿಕೊಂಡಂತಿರುವ ಬೆಲ್ದಂಡ ಯಾವ ಅಳುಕು ಇಲ್ಲದೆ ಜನರ ಕಣ್ಣಿಗೆ ಬೀಳುವುದನ್ನು ಕಲಿತಿದ್ದಳು.



### ಅಪಾಯದಲ್ಲಿ ಬೆಲ್ದಂಡ

13 ಮಕ್ಕಳ ತಾಯಿ ಈಗ ಅಪಾಯದಲ್ಲಿದ್ದಾಳೆ. ಕಳೆದ ಮೇ 4ರ ನಂತರ ಯಾರ ಕಣ್ಣಿಗೂ ಬಿದ್ದಿಲ್ಲ. ಮೇ ಮೂರರಂದು ಕೊನೆಯದಾಗಿ ಕಂಡಾಗ ಅದರ ಮೈ ಮತ್ತು ಕಾಲುಗಳ ಮೇಲೆ ಎದ್ದು ಕಾಣುವಂಥ ಗಾಯಗಳಾಗಿದ್ದವು. ಈಗ ಅದು ಕಾಣಿಸುತ್ತಲೂ ಇಲ್ಲ. ಮರಿಗಳು ಎಲ್ಲಿವೆಯೋ, ಆದಷ್ಟು ಬೇಗ ಹುಲಿಯನ್ನು ಹುಡುಕಿ ಚಿಕಿತ್ಸೆ ನೀಡಬೇಕು ಎಂದು ವನ್ಯಜೀವಿ ತಜ್ಞ ಸಿದ್ಧಾರ್ಥ್ ಸಿಂಗ್ ಅರಣ್ಯ ಇಲಾಖೆಯನ್ನು ಕೇಳಿಕೊಂಡಿದ್ದರು. ಆದರೆ ಇಂದಿನ ತನಕ ಬೆಲ್ದಂಡ ಕಾಣಿಸಿಕೊಂಡಿಲ್ಲ. ಮಹಾತಾಯಿ ಕಳ್ಳಬೇಟೆ ಅಥವಾ ಸರಹದ್ದಿಗಾಗಿ ನಡೆಯುವ ಸಹಜ ಸಂಘರ್ಷಕ್ಕೆ ಬಲಿಯಾಗಿ ತನ್ನ ಹೋರಾಟದ ಬದುಕನ್ನು ಮುಗಿಸಿಬಿಟ್ಟಿದ್ದಾಳೋ?

ತೀರಾ ಇತ್ತೀಚೆಗೆ ಇವಳಿಗೊಬ್ಬಳು 'ಮಾಯಾ' ಎನ್ನುವ ಪ್ರತಿ ಸ್ಪರ್ಧಿ ತಡೋಬಾ ಅಂಧಾರಿ ಹುಲಿ ಸಂರಕ್ಷಿತ ಅರಣ್ಯದಿಂದ ದುದ್ವ ಕಾಡಿಗೆ ಬಂದಿದ್ದಳು. ಐದು ಹೆರಿಗೆಗಳಿಂದ 13 ಮರಿಗಳಿಗೆ ಜನ್ಮ ನೀಡಿದ್ದ ಮಾಯಾಳ ಎರಡು ಮರಿಗಳು ಮಾತ್ರ ಜೀವಂತ ಇವೆ. 2023ರ ನಂತರ ಯಾರ ಕಣ್ಣಿಗೂ ಬಿದ್ದಿಲ್ಲ.

### ಹುಲಿ ಸಂಖ್ಯೆ ಹೆಚ್ಚಿದರೆ ನಾಡು ಸುರಕ್ಷಿತ

ಜನಿಸಿದ ನಾಲ್ಕೈದು ಮರಿಗಳಲ್ಲಿ ಎರಡ್ಮೂರು ಬದುಕುಳಿಯುವುದು ಹುಲಿ ಸಂತತಿಯಲ್ಲಿ ಸಾಮಾನ್ಯ ಸಂಗತಿ. ಜೀವಿ ಆವಾಸವನ್ನು ಸುಸ್ಥಿತಿಯಲ್ಲಿಡಲು ಸಾಕಷ್ಟು ಸಂಖ್ಯೆಯ ವನ್ಯಜೀವಿಗಳು ಇರಬೇಕು. ಅಪಾಯದ ಅಂಚಿನಲ್ಲಿರುವ ಹುಲಿ ಸಂತತಿ ಹೆಚ್ಚಿದಷ್ಟು ಭೂಮಿಗೆ ಕ್ಷೇಮ. ಹುಲಿ ಸಂರಕ್ಷಣೆಗಾಗಿ ಕಾಳಜಿ ವಹಿಸುತ್ತಿರುವ ನಮ್ಮ ದೇಶದಲ್ಲಿ ಹುಲಿಯೊಂದು ಹೆಚ್ಚಿನ ಮರಿಗಳಿಗೆ ಜನ್ಮ ನೀಡಿದರೆ ಸಂಭ್ರಮಿಸುವ ವಿಷಯ.

### ಇದು ನಮ್ಮ ಜವಾಬ್ದಾರಿ

ಕರ್ನಾಟಕದ ಮಲೆ ಮಹದೇಶ್ವರ ವನ್ಯಜೀವಿ ವಿಭಾಗದಲ್ಲಿ ವಿಷ ಹಾಕಿ ಹುಲಿ ಮತ್ತು 4 ಮರಿಗಳನ್ನು ಸಾಯಿಸಿದ ದಾರುಣ ಸುದ್ದಿ ವನ್ಯಜೀವಿಪ್ರಿಯರ ನಿದ್ದೆಗೆಡಿಸಿದೆ. ಕೊಲೆಗಡುಕರ ಬಂಧನವಾಗಿದೆ ನಿಜ. ಅವರ ಬಂಧನ ಮತ್ತು ಶಿಕ್ಷೆಗಳಿಂದ ನಾಡಿನ ಅಮೂಲ್ಯ ಸಂಪತ್ತಾದ ಹುಲಿಗಳು ಮತ್ತೆ ಉಸಿರಾಡುತ್ತವೆಯೆ? ಆದರೂ ಮಕ್ಕಳು ಮತ್ತು ಸಂಸಾರ ಕ್ಷೇಮಕ್ಕಾಗಿ ತಾಯಂದಿರ ಹೋರಾಟ ಮುಂದುವರೆದಿದೆ. ಹುಲಿಗಳು ಉಳಿದರೆ ಮನುಕುಲವೂ ಉಳಿಯುತ್ತದೆ. ಕಾಡಿನ ಸಂರಕ್ಷಣೆ ಜೊತೆಗೆ ಹುಲಿಗಳ ರಕ್ಷಣೆಯು ಆಗಬೇಕು. ಇದು ನಮ್ಮ ಸಂವಿಧಾನ ನಮಗೆ ನೀಡಿರುವ ಪ್ರಮುಖ ಜವಾಬ್ದಾರಿ. ಅದನ್ನು ನಾವೆಲ್ಲರೂ ತಪ್ಪದೆ ಮಾಡಬೇಕು.